ಕರ್ನಾಟಕ ವಿಧಾನ ಸಭೆ

ಗುರುವಾರ 12ನೇ ಫೆಬ್ರವರಿ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 10-40 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು

ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರು : 2004-05ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಉತ್ತರಿಸಲು ಹನ್ನೊಂದು ಗಂಟೆಗೆ ಬರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದರಿಂದ, ಅವರು ಬರುವವರೆಗೆ 10-15 ನಿಮಿಷಗಳೊಳಗೆ ಯಾರಾದರೂ 2-3 ನಿಮಿಷ ಮಾತನಾಡಬಹುದಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೆ, ಎರಡು ನಿಮಿಷಗಳಲ್ಲಿ ಮಾತನಾಡಬೇಕೆಂದರೆ ನಾನು ಮಾತನಾಡುವುದಿಲ್ಲ.

ಅಧ್ಯಕ್ಷರು : ಹನ್ನೊಂದು ಗಂಟೆಗೆ ಬರುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿ ಕಳುಹಿಸಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅವರು ಎಷ್ಟೊತ್ತಿಗಾದರೂ ಬರಲಿ. ಎರಡು ನಿಮಿಷದೊಳಗೆ ಮಾತನಾಡಿ ಎಂದರೆ ಅಷ್ಟರೊಳಗೆ ನಾನು ಹೇಗೆ ಮಾತನಾಡುವುದು? ಎರಡು ನಿಮಿಷದೊಳಗೆ ನಾನು ಮಾತನಾಡುವುದಕ್ಕಾಗುತ್ತದೆಯೇ ತಾವೇ ಹೇಳಿ. ನಾನು ನಿಮ್ಮಿಂದ ಬೆಲ್ ಹೊಡೆಸಿಕೊಳ್ಳಲು ತಯಾರಿಲ್ಲ. ನಾನು ಈ ಸದನಕ್ಕೆ ಬಂದಾಗಿನಿಂದಲೂ ಯಾವುದೇ ಸಭಾಧ್ಯಕ್ಷರೂ ಕೂಡ ನನಗೆ ಇದುವರೆವಿಗೂ ಬೆಲ್ ಹೊಡೆದಿಲ್ಲ. ನೀವು ಬೆಲ್ ಹೊಡೆಯುತ್ತೀರೆಂದರೆ ನಾನು ಮಾತನಾಡುವುದಿಲ್ಲ. ಇವ್ಯ ಬೇರೆಯವರಿಂದ ಮಾತನಾಡಿಸಿಕೊಳ್ಳಬಹುದು.

1.ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಟಿ.ರಾಜಣ್ಣ (ಕಾರ್ಯದರ್ಶಿ) : ಸನ್ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ:

1. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ವಿಧೇಯಕ, 2004 (ಅನುಬಂಧ-I)
2. ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ, 2004.(ಅನುಬಂಧ-II)
3. ಕರ್ನಾಟಕ ಗ್ರಾಮ ರಕ್ಷಣಾ ದಳಗಳ (ನಿರಸನ) ವಿಧೇಯಕ, 2004.(ಅನುಬಂಧ-III)

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಅಧ್ಯಕ್ಷರು : ಮಾನ್ಯ ಸಿಂಧ್ಯಾರವರೆ, ಮಾನ್ಯ ಮುಖ್ಯಮಂತ್ರಿಗಳು ಬರುವವರೆಗೆ ತಾವು ಮಾತನಾಡಿ, ಅವರು ಎಷ್ಟೊತ್ತಿಗೆ ಬರುತ್ತಾರೋ, ಆಗ ನಿಲ್ಲಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ತಡವಾಗಿ ಬರುವುದಕ್ಕೆ ಮಲ್ಲಿಕಾರ್ಜುನ ಖರ್ಗೆಯವರಿಂದ ಹೇಳಿ ಕಳುಹಿಸೋಣ ಬಿಡಿ. ನಮ್ಮ ಮುಖ್ಯಮಂತ್ರಿಗಳು ಮಂಡಿಸಿರುವ....

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಅಧ್ಯಕ್ಷರೆ, ಅವರು ಮಾತನಾಡಿದ ನಂತರ ನನಗೆ ಐದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಬೇಡ. ನಿಮ್ಮ ಪಕ್ಷದವರೇ ಮಾತನಾಡಲು ಈಗಾಗಲೇ ನಾಲ್ಕು ಗಂಟೆ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ಅವರು(ಸಿಂಧ್ಯಾ) ಮಾತನಾಡಿದ ನಂತರ ನನಗೆ ಮಾತನಾಡಲು ಅವಕಾಶ ಕೊಡುತ್ತೇನೆಂದು ಹೇಳಿದರೆ ಸಾಕು.

ಅಧ್ಯಕ್ಷರು : ಅವರು ಮಾತನಾಡಿ ಮುಗಿಯಲಿ, ಬಿಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ನನ್ನ ಗ್ರಹಾಚಾರ ಹೇಗಿದೆಯೆಂದರೆ, ನಾನು ಮಾತನಾಡಲು ಎದ್ದು ನಿಂತರೆ ನಮ್ಮ ಸ್ನೇಹಿತರು, 'ನೀವು ಮಾತನಾಡುವುದು ಬೇಡ' ಎಂದರೆ. ನಾನು ಅವರಿಗೆ ಹೇಳಿದೆ: 'ಕೃಷ್ಣ ಬೈರೇಗೌಡರಿಗೆ ಕೇವಲ ಮೂರು ತಿಂಗಳಷ್ಟೇ ಅವಧಿ ಸಿಕ್ಕಿರುವುದರಿಂದ ಈ ಸದನದಲ್ಲಿ ಅವರಿಗೆ ಮಾತನಾಡಲು ಐದು ನಿಮಿಷ ಅವಕಾಶ ಕೊಡಿ' ಎಂದು ಹೇಳುವುದಕ್ಕೆ ನಾನು ಎದ್ದು ನಿಂತೆ. ಇವೊತ್ತು ಏಕೋ ಮಾನ್ಯ ಶ್ರೀನಿವಾಸಗೌಡರು ನನಗೆ ಮಾತನಾಡಲು ಅಡ್ಡಿಪಡಿಸುತ್ತಿದ್ದಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುಡುವನಹಳ್ಳಿ : ನೀವು (ಸಿಂಧ್ಯಾ) ಮಾತನಾಡಿದ ನಂತರ ನಾನು ಮಾತನಾಡುತ್ತೇನೆಂದರೆ ಮಾನ್ಯ ಅಧ್ಯಕ್ಷರ ಬಳಿ ಕೇಳಿಕೊಂಡೆ ಅಷ್ಟೆ.

ಶ್ರೀ ಆರಗ ಜ್ಞಾನೇಂದ್ರ : ಮಾತನಾಡಬಾರದೆಂದು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ ; ಮಾತನಾಡಬಾರದೆಂದು ನೀವು ಹೇಳುವುದಕ್ಕಾಗುವುದಿಲ್ಲ. ನಾವು ಮಾತನಾಡಬೇಕೇ ಬೇಡವೇ ಎಂಬುದನ್ನು ಮುಂದಿನ ಚುನಾವಣೆಯಲ್ಲಿ ಜನರು ಹೇಳುತ್ತಾರೆ!

ಅಧ್ಯಕ್ಷರು : ಈಗ argument ಬೇಡ, please commence.

2. ವಿತ್ತೀಯ ಕಾರ್ಯಕಲಾಪಗಳು

(1) 2004--05 ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ ಹಾಗೂ ಮುಖ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೇ, ಇದು ಈ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಕಾಂಗ್ರೆಸ್ಸಿನ ಸರ್ಕಾರ ಬಂದ ಮೇಲೆ ಮಂಡಿಸುತ್ತಿರುವ 5ನೇ ಆಯವ್ಯಯವಾಗಿಯ ಈ ಮುಖ್ಯಮಂತ್ರಿಗಳು ಬಹಳ lucky Chief Minister ಆಗಿದ್ದಾರೆ. He is the most luckiest Chief Minister I have seen in 22 years of my political carrier as an MLA. ಏಕೆಂದರೆ, ಇವರಿಗೆ ಸಿಕ್ಕಿದಂತಹ Governorsಗಳು, witch-hunting Governorsಗಳು ಅಲ್ಲ. ಇವರಿಗೆ ಬಹಳ favourable ಎಂದು ಹೇಳಿದರೂ ಕೂಡ ತಪ್ಪಾಗಲಾರದು. ಆಮೇಲೆ Opposition is divided every-day. This is the weakest Opposition also I have seen. ಅದಲ್ಲದೆ ಈ ಮುಖ್ಯಮಂತ್ರಿಗಳಿಗೆ internal dissentionsಇಲ್ಲ. ನಾವು ಈ ಸಭೆಯಲ್ಲಿ ಇರತಕ್ಕಂಥವರು ಅದನ್ನು ಗಮನಿಸಿದ್ದೇವೆ. ಮಾನ್ಯ ಬಂಗಾರಪ್ಪನವರು ಮತ್ತು ಮಾನ್ಯ ವೀರಪ್ಪ ಮೊಯ್ಲಿಯವರ ಕಾಲದಲ್ಲಿ ಆಡಳಿತ ಪಕ್ಷದ ಸದಸ್ಯರುಗಳೇ 40 ಜನ ಒಳಗಡೆ ಬಂದು ಬಿಟ್ಟಿದ್ದರು. ಆಮೇಲೆ ಇವರಿಗೆ High Command ಕಾಟವೂ ಕೂಡ ಇಲ್ಲ. He has manipulated High Command also in his favour. There is full co-operation from the Central Government. Central Governmentನವರೇನಾದರೂ ಈ ಬರಗಾಲದ ಪರಿಸ್ಥಿತಿಯಲ್ಲಿ ಇವರಿಗೇನಾದರೂ ದುಡ್ಡು ಕೊಡದೇ ಹೋಗಿದ್ದರೆ, ಇವತ್ತಿನ ಪರಿಸ್ಥಿತಿಯಲ್ಲಿ ಈ ಸರ್ಕಾರ ಹರಾಜು ಎದ್ದು ಹೋಗಿ ಬಿಡುತ್ತಿತ್ತು. Union